(SRI V. MASIYAPPA.)

ask for a change, to change one or the other to the other department and provide them in the same place ?

Sri T. CHANNIAH.—It is not possible. When the wife is posted to the Health Department, she cannot be changed to the Medical Department unless otherwise the Health Department recommends her case to the Medical Department and *vice versa* the Medical Department must be prepared to take her. Unless such a thing takes place and also unless there is a vacancy in the same place, it is not possible to post them in the same place.

ಶ್ರೀ ಕೆ. ಪ್ರಭಾಕರ್.—ಸರ್ಕಾರಿ ನೌಕರಿಯಲ್ಲಿರುವ ಪತಿಪತ್ನಿಗಳಿಬ್ಬರೂ ಒಂದೇಕಡೆ ಇರುವುದಕ್ಕೆ ಅವಕಾಶ ವಿದ್ದರೆ ಅವರ ವರ್ಗಾವರ್ಗಿಯಲ್ಲಿ ತಾರತಮ್ಯ ನೋಡಿ ವರ್ಗಾಯಿಸಬೇಕೆಂಬ ಅಂಶಕ್ಕೆ ಗಮನವನ್ನೇ ಕೊಡದೆ ವರ್ಗಾಯಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಕೆ. ಪ್ರಭಾಕರ್.—ಅಂಥ ನಿದರ್ಶನಗಳನ್ನು ತಮ್ಮ ಗಮನಕ್ಕೆ ತಂದರೆ ಅವುಗಳನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಮಾಡುತ್ತೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಸಾಧ್ಯವಾದರೆ ಪರಿಶೀಲನೆ ಮಾಡಲಾಗುತ್ತದೆ ಎಂದು ಹೇಳಿದ್ದೀರಿ. ಒಂದೇಕಡೆ ಇಡಬೇಕಾದವರನ್ನು ಸಾಧ್ಯವಾದ ಮಟ್ಟಿಗೆ ಹಾಗೆ ಇಡಬಾರದೆಂಬುದಕ್ಕೆ ಏನಾದರೂ ಕಾರಣಗಳಿದ್ದರೆ ತಿಳಿಸುತ್ತೀರಾ ?

ಶ್ರೀ ಟಿ. ಚನ್ನಯ್ಯ.—ನಿರ್ದಿಷ್ಟವಾದಂಥ ನಿದರ್ಶನಗಳೇನಾದರೂ ಇದ್ದಲ್ಲಿ ಅವುಗಳನ್ನು ನಮ್ಮ ಗಮನಕ್ಕೆ ತಂದರೆ ಅದನ್ನು ಪರಿಪಡಿಸಲಾಗುತ್ತದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇತ್ತೀಚೆಗೆ ಹೀಗೆ ನೌಕರಿಯಲ್ಲಿರತಕ್ಕ ಗಂಡ-ಹೆಂಡತಿಯರನ್ನು ಬೇರೆ ಬೇರೆ ಜಾಗಗಳಿಗೆ ವರ್ಗಾಯಿಸುತ್ತಿರುವುದು ಜಾಸ್ತಿ ಆಗುತ್ತಿದೆಯಲ್ಲವೇ ?

ಶ್ರೀ ಟಿ. ಚನ್ನಯ್ಯ.—ಜಾಸ್ತಿ ಏನೂ ಆಗುತ್ತಿಲ್ಲ.

Ayurvedic College at Mysore (Central grant to upgrade).

Q.—358. **Sri S. M. LINGAPPA** (Krishnarajapet).—

Will the Government be pleased to state :—

(*a*) whether it is a fact that the Hon'ble Minister for Health had informed the House in the last Budget Session during the course of discussion on grants under Medical Health that the Government of India had agreed to give a grant for the upgrading of Ayurvedic College at Mysore ;

(*b*) to what purpose this grant has been utilised ;

(*c*) whether it is a fact that the strength of the College is increasing year by year ;

(*d*) the steps Government have taken to house the increased number of students ?

A.—**Sri T. CHANNIAH** (Minister for Public Health and Local Self-Government).—

(*a*) Mention was made that Government were expecting a sizeable grant and that the question of upgrading the College would be considered after it was received.

(*b*) Does not arise in view of the reply to (*a*) above.

(*c*) Yes.

(*d*) This is being examined.

ಶ್ರೀ ಎಸ್. ಎಂ. ಲಿಂಗಪ್ಪ.—ಈಗ ಮೈಸೂರಿನಲ್ಲಿರುವ ಆಯುರ್ವೇದ ಕಾಲೇಜಿನಲ್ಲರತಕ್ಕ ಅಧ್ಯಾಪಕ ವರ್ಗ ಸಮರ್ಪಕವಾಗಿಲ್ಲ ಎನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಸಮರ್ಪಕವಾಗಿದೆ ಎನ್ನುವುದು ನನ್ನ ಗಮನಕ್ಕೆ ಬಂದಿದೆ.

ಶ್ರೀ ಎಸ್. ಎಂ. ಲಿಂಗಪ್ಪ.—ಆ ಕಾಲೇಜಿನ ವಿದ್ಯಾರ್ಥಿಗಳು ಈಗಿರುವ ಅಧ್ಯಾಪಕ ವರ್ಗ ಸರಿಯಾಗಿರುವುದಿಲ್ಲವೆಂದು ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಎಸ್. ಎಂ. ಲಿಂಗಪ್ಪ.—ಹಾಗೆ ಅವರು ಮನವಿಗಳನ್ನು ಸಲ್ಲಿಸಿದರೆ, ಪರಿಶೀಲನೆ ಮಾಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಮಾಡುತ್ತೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಈ ಆಯುರ್ವೇದಿಕ್ ಕಾಲೇಜಿನಲ್ಲಿ ಆಲೋಪೇಥಿಕ್ ಟ್ರೈನಿಂಗನ್ನೂ ಕೊಡುತ್ತಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಕೊಡುತ್ತಿದ್ದೇವೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಅದಕ್ಕೆ ಕಾರಣ ಏನು ?

ಶ್ರೀ ಟಿ. ಚನ್ನಯ್ಯ.—ಆ ಕಾಲೇಜಿನ ಕರಿಕ್ಯುಲಂನಲ್ಲಿ ಆ ರೀತಿ ಆಲೋಪೆಥಿಕ್ ಟ್ರೈನಿಂಗನ್ನು ಕೊಡಬೇಕೆಂದು ಇದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹಾಗೆ ಮಾಡದನ್ ಮೆಡಿಸಿನ್‌ಗೆ ಅವಕಾಶಕೊಟ್ಟಲ್ಲಿ ಈ ಆಯುರ್ವೇದ ಪದ್ಧತಿಯೇ ಮರೆತುಹೋಗುವುದಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಆ ರೀತಿ ಮರೆಯಲು ಅವಕಾಶವಿಲ್ಲ.